**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ</u>**
**<u>ಚನ್ನಪಟ್ಟಣ</u>**

C C No. 244/2018

CW. 3 PW.3

**ಹೆಸರು** : **ಸುಂದರ್**
**ತಂದೆ/ಗಂಡ** : **ದರ್ಮ**
**ವಯಸ್ಸು** : **26** ವರ್ಷ
**ಉದ್ಯೋಗ** : ವ್ಯಾಪಾರ
**ವಾಸ** : ಚನ್ನಪಟ್ಟಣ.

ಸಾಕ್ಷಿಯನ್ನು ಕರೆಸಲಾಯಿತು, ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ ದಿ.17.01.2019.

1. ಪ್ರಾಸಾ-1 ನನ್ನ ತಾಯಿ. ಪ್ರಾಸಾ-2 ನನ್ನ ತಂದೆ. ಚಾಸಾ- 4 ನನ್ನ ತಮ್ಮ. ಚಾಸಾ-5 ಗೊತ್ತು. ನ್ಯಾಯಾಲಯದಲ್ಲಿರುವ ಆರೋಪಿಗಳು ಗೊತ್ತು.

2. ಚನ್ನಪಟ್ಟಣದ ತಮಿಳು ಕಾಲೋನಿಯಲ್ಲಿ ನಮಗೆ ಸೇರಿದ ನಿವೇಶನ ಇದೆ. ಇದರಲ್ಲಿ ಇದ್ದ ಹಳೆಯ ಮನೆ ಕೆಡವಿ ಹೊಸ ಮನೆಯನ್ನು ಕಟ್ಟಲು ಒಂದು ವರ್ಷದ ಹಿಂದೆ ನಾವು ಹೋಗಿದ್ದೆವು. ಸದರಿ ಜಾಗದಲ್ಲಿ ನಮಗೆ ಮನೆ ಕಟ್ಟಲು ಆರೋಪಿಗಳು ಅಡ್ಡಿ ಪಡಿಸಿದ್ದರು. ಇದರ ಬಾಬ್ತು ಕಾನೂನು ಕ್ರಮ ಜರುಗಿಸಿದ್ದೆವು. ಒಂದು ದಿನ ಸಂಜೆ 6.00 ಗಂಟೆ ಸಮಯದಲ್ಲಿ ಆರೋಪಿಗಳು ನಮ್ಮ ಮನಗೆ ಏಕಾಏಕಿ ನುಗ್ಗಿ 1 ನೇ ಅರೋಪಿ ಪ್ರಾಸಾ-1 ರವರ ಕೆನ್ನೆಯ ಮೇಲ್ ಭಾಗಕ್ಕೆ ಇಟ್ಟಿಗೆಯಿಂದ, 2 ನೇ ಆರೋಪಿ ಚಾಕುವಿನಿಂದ ನನ್ನ ತಂದೆಯ ಬಲ ಕೈ ಹೆಬ್ಬೆರಳಿಗೆ, 3 ಹಾಗೂ 4 ನೇ ಅರೋಪಿಗಳು ನನಗೆ ಹಾಗೂ ಚಾಸಾ-4 ರವರಿಗೆ ಕೈಗಳಿಂದ ಹೊಡೆದಿರುತ್ತಾರೆ. ನನಗೆ ಹಾಗೂ ಚಾಸಾ -4 ರವರಿಗೆ ಗಾಡಿ ಓಡಿಸಿ ಸಾಯಿಸುತ್ತೇವೆಂದು ಪ್ರಾಣಾ ಬೆದರಿಕೆ ಹಾಕಿದ್ದರು. ನ್ಯಾಯಾಲಯದ ಮುಂದೆ ಇರುವ ಮು ಮಾಲು 1 ಹಾಗೂ 2 ನ್ನು ನೋಡಿ ಗುರುತಿಸುತ್ತಿದ್ದೇನೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ ಇದು ಪಂಚನಾಮೆ ಆಗಿರುತ್ತದೆ ಪಂಚನಾಮೆಯನ್ನು **<u>ನಿಪಿ-3</u>** ಎಂದು ಸಾಕ್ಷಿಯ ಸಹಿಯನ್ನು **<u>ನಿಪಿ-3(ಎ)</u>** ಎಂದು ಗುರುತಿಸಲಾಯಿತು. ನಿಪಿ-3 ರ ಸಮಯದಲ್ಲಿ ಮು ಮಾಲು 1

ಹಾಗೂ 2 ನ್ನು ವಶಪಡಿಸಿಕೊಂಡಿರುತ್ತಾರೆ. ನಿಪಿ-3 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ.

**ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಲಾಯಿತು. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಎ ಪಿ ಪಿ ಯವರಿಂದ**

4. ನಾನು ಘಟನಾಸ್ಥಳವನ್ನು ತೋರಿಸಿದ್ದ ಮೇರೆಗೆ ಪೋಲೀಸರು ನನ್ನ, ಚಾಸಾ-5 ಮತ್ತು 6 ರ ಸಮಕ್ಷಮ ಮು ಮಾಲು 1 ಹಾಗೂ 2 ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ ನಿಪಿ-3 ಕ್ಕೆ ನಾನು ಸಹಿಯನ್ನು ಘಟನಾ ಸ್ಥಳದಲ್ಲೆ ಹಾಕಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

5. ಘಟನಾ ಸಂದರ್ಭದಲ್ಲಿ ನಮ್ಮ ಬಾಬ್ತು ಜಾಗ ಖಾಲಿ ನಿವೇಶನ ಆಗಿತ್ತು ಎಂದರೆ ಸರಿ. ನಮ್ಮ ಮನೆಯ ಎದುರುಗಡೆ ಒಂದು ದೇವಸ್ಥಾನ ಇದೆ ಎಂದರೆ ಸರಿ. ನಮ್ಮ ಮನೆಯ ಪಶ್ಚಿಮ ದಿಕ್ಕಿನಲ್ಲಿ ಸಾಲಾಗಿ ಮನಗಳು ಇವೆ. ದೇವಸ್ಥಾನ ಹಾಗೂ ನಮ್ಮ ಮನೆಯ ಮಧ್ಯೆಯ ರಸ್ತೆ ಚಿಕ್ಕದಾಗಿತ್ತು ಎಂದರೆ ಸುಳ್ಳು. ಈಗ ಅಂದಾಜು 15 ಅಡಿ ರಸ್ತೆ ಇದೆ ಮುಂದೆ ಪಶ್ಚಿಮಕ್ಕೆ ಹೋದರೆ 7 ಅಡಿ ರಸ್ತೆ ಆಗಿರುತ್ತದೆ. ಸದರಿ ರಸ್ತೆ ಓಡಾಡಲು ತೊಂದರೆ ಆಗುತ್ತದೆ ಎಂದರೆ ಸುಳ್ಳು. ಈ ಕಾರಣದಿಂದ ಆರೋಪಿಗಳು ನಗರಸಭೆ ಆರ್ಜಿ ಸಲ್ಲಿಸಿದ್ದರು ಎಂದರೆ ಸುಳ್ಳು. ನಗರಸಭೆ ಅಧಿಕಾರಿಗಳು ಈಗ ಅಲ್ಲಿ ರಸ್ತೆ ಮಾಡಿದ್ದಾರೆ ಎಂದರೆ ದಬ್ಬಾಳಿಕೆಯಿಂದ ಮಾಡಿದ್ದಾರೆ ಆರೋಪಿಗಳು ನಗರಸಭೆ ಅದಿಕಾರಿಗಳೊಂದಿಗೆ ನಿಂತು ರಸ್ತೆ ಮಾಡಿಸಿದ್ದರು ಎಂದರೆ ಸರಿ. ಈ ಕಾರಣದಿಂದ ಆರೋಪಿಗಳಿಗೂ ನಮಗೂ ವೈ ಮನಿಸಿದೆ ಎಂದರೆ ಸರಿ. ನಗರಸಭೇಯ ವಿರುದ್ದ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ.

6. ರಸ್ತೆ ಅಗಲ ಆದ ನಂತರ ಈ ದೂರು ಸಲ್ಲಿಸಲಾಗಿದೆ ಎಂದರೆ ಸುಳ್ಳು. ಪ್ರತಿದಿನ ನಾನು ಹಳ್ಳಿಗಳಿಗೆ ಅಂದಾಜು 1.00 ಗಂಟೆಗೆ ಚಕ್ಕಲಿ ವ್ಯಾಪಾರಕ್ಕೆ ಹೋಗಿ 4.00 ಗಂಟೆಗೆ

ಹಿಂತಿರುಗುತ್ತೇನೆ. ಆರೋಪಿಗಳಿಗೆ ನಮ್ಮ ಮನೆಯ ಆಜುಬಾಜು ಯಾವುದೇ ಸ್ವತ್ತುಗಳು ಇಲ್ಲ ಎಂದರೆ ಸರಿ. 3 ಹಾಗೂ 4 ನೇ ಆರೋಪಿಗಳ ಮನೆ ಅದೇ ಕಾಲೋನಿಯಲ್ಲಿ ಬರುತ್ತದೆ. ನಮ್ಮ ಮನೆಯ ಬೀದಿಯ ಪಕ್ಕದ ಬೀದಿಯಲ್ಲಿಯೇ 3 ಹಾಗೂ 4 ನೇ ಅರೋಪಿಗಳ ಮನೆ ಬರುತ್ತದೆ.

7. ಸದರಿ ಗಲಾಟೆ ಅಂದಾಜು ಅರ್ಧ ಗಂಟೆ ನಡೆದಿರುತ್ತದೆ. ಸದರಿ ಗಲಾಟೆಯನ್ನು ಬಿಡಿಸಲು ಯಾರು ಬಂದಿರಲಿಲ್ಲ. ನನ್ನ ತಂದೆ ಹಾಗೂ ತಾಯಿಯ ಬಟ್ಟೆಗಳು ರಕ್ತ ಕಲೆಗಳಾಗಿದ್ದವು. ನೆಲ ಮೇಲೆ ರಕ್ತ ಕಲೆಗಳಾದ್ದವೊ ಇಲ್ಲವೋ ಎಂದು ಗಾಬರಿಯಲ್ಲಿ ಗಮನಿಸಲಿಲ್ಲ. ನನಗೆ ಹಾಗೂ ಚಾಸಾ-4 ರವರಿಗೆ ಮೈ ಕೈಗೆ ಆರೋಪಿಗಳು ಹಲ್ಲೆ ಮಾಡಿರುತ್ತಾರೆ. ಈ ಬಾಬ್ತು ನಾನು ಅಸ್ಪತ್ರೆಯಲ್ಲಿ ಒಳರೋಗಿಯಾಗಿರಲಿಲ್ಲ. ನೋವಿನ ಹಿನ್ನೆಲೆಯನ್ನು ವೈದ್ಯರಿಗೆ ತಿಳಿಸಿದ್ದೆ. ಚಾಸಾ-4 ಸಹ ನನ್ನೊಂದಿಗೆ ಸೂಜಿ ಮದ್ದು ಪಡೆದಿದ್ದರು.

8. ಪೋಲೀಸರು ಘಟನಾ ಸ್ಥಳಕ್ಕೆ ಯಾವಾಗ ಬಂದಿದ್ದರು ಎಂದು ನೆನಪಿಲ್ಲ. ನಿಪಿ-3 ರಲ್ಲಿ ಏನು ಬರೆದಿದ್ದಾರೆಂದು ನಿಖರವಾಗಿ ಗೊತ್ತಿಲ್ಲ. ಪೋಲೀಸರು ಘಟನಾ ಸ್ಥಳಕ್ಕೆ 3.00 ರಿಂದ 4.00 ಗಂಟೆ ಸಮಯದಲ್ಲಿ ಬಂದಿದ್ದರು.

9. ಮು ಮಾಲು 2 ನ್ನು ಕತ್ತಿ, ಚೂರಿ ಎಂಬುದಾಗಿಯು ಸಹ ಕರೆಯುತ್ತಾರೆ ಎಂದರೆ ಸರಿ. ಮು ಮಾಲು 1 ಹಾಗೂ 2 ಕ್ಕೆ ನನ್ನ, ಮತ್ಯಾರದ್ದಾರೋ ಸಹಿಯನ್ನು ಪಡೆದಿದ್ದಾರೋ ಇಲ್ಲವೊ ನೆನಪಿಲ್ಲ. ನಿಪಿ-3 ಕ್ಕೆ ಸಹಿ ಮಾಡಿದ ಉಳಿದ ಪಂಚರ ಹೆಸರು ಗೊತ್ತಿಲ್ಲ. ನಮ್ಮ ಮನೆಯ ಮುಂದೆ ಇತ್ತು. ಮು ಮಾಲು 1 ಹಾಗೂ 2 ಸಾಮನ್ಯಾವಾಗಿ ಮನೆ ಯಲ್ಲಿ ಸಿಗುತ್ತವೆ ಎಂದರೆ ಸುಳ್ಳು. ಮು ಮಾಲು 1 ಹಾಗೂ 2 ನ್ನು ಈ ಮೊಕ್ಕದ್ದಮೆ ಬಲಪಡಿಸಲು ನಾವೇ ನೀಡಿದ್ದೇವೆ ಎಂದರೆ ಸುಳ್ಳು.

10. ಆರೋಪಿಗಳು ನಮ್ಮ ಮೇಲೆ ಹಲ್ಲೆ ಮಾಡಿಲ್ಲ, ಫ್ರಾಸಾ-1, 2 ರವರಿಗೆ ರಕ್ತ ಗಾಯಗಳಾಗಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ. ಬೇರೆ ಕಾರಣಗಳಿಂದ ಆದ ಗಾಯಕ್ಕೆ

ಆರೋಪಿಗಳ ಹೆಸರನ್ನು ಹಚ್ಚಿದ್ದೇವೆ ಎಂದರೆ ಸುಳ್ಳು. ನಿಪಿ-3 ನ್ನು ಸ್ಥಳದಲ್ಲಿ ಜರುಗಿಸಿಲ್ಲ ಎಂದರೆ ಸುಳ್ಳು. ಠಾಣೆ ಯಲ್ಲಿ ತಾಯಾರಿಸಿದ ಮಹಜರಿಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸುಳ್ಳು. ನಮ್ಮ ಬಾಬ್ತು ಜಾಗ ರಸ್ತೆಗೆ ಹೋಗಿದೆ ಎಂದು ಆರೋಪಿಗಳ ಮೇಲೆ ದ್ವೇಷದಿಂದ ಸುಳ್ಳು ಸಾಕ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**